ಓ. ಎಸ್ . 125/2024 ಪಿ.ಡಬ್ಲ್ಯೂ - 1 ಗಂಗವ್ವಾ ಗೋಕಾವಿ

**(ದಿನಾಂಕಃ 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎ ಎಂ ಎಚ್ ವಕೀಲರಿಂದ -**

1. ನಿರ್ಮಲಾ ಅನ್ನಗೌಡಾ ಪಾಟೀಲ ಹಾಗೂ ಸದಾಶಿವ ಗೋಕಾವಿ ಚಿದಾನಂದ ಇವರ ಮಕ್ಕಳು. ಇವರ ತಾಯಿಯ ಹೆಸರು ಕಲಾವತಿ. ನಾನು ಚಿದಾನಂದನ ಹೆಂಡತಿ ಅಲ್ಲ ಹಾಗೂ ವಾದಿ 2 ಮತ್ತು 3 ಇವರು ಚಿದಾನಂದನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. 2014 ರಲ್ಲಿ ಚಿದಾನಂದನ ಜೊತೆಗೆ ನನ್ನ ಲಗ್ನ ಆಯಿತು. ಸಬ್ ರಿಜಿಸ್ಟ್ರಾರ ಕಛೇರಿಯಲ್ಲಿ ನಮ್ಮ ಲಗ್ನ ಆಗಿದೆ. ಲಗ್ನ ಪತ್ರಿಕೆ ಇದೆ ಹಾಗೂ ಫೋಟೊ ಇರುವುದಿಲ್ಲ. ಕೈತನಾಳಮಠದ ಸ್ವಾ ಮಿಗಳು ನಮ್ಮ ಲಗ್ನ ಮಾಡಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಚಿದಾನಂದನ ಜೊತೆಗೆ ನನ್ನ ಲಗ್ನ ಯಾವತ್ತೂ ಆಗಿಲ್ಲ ಎಂದರೆ ಸರಿಯ್ಲ.

2. ನನ್ನ ಲಗ್ನ ಚಿದಾನಂದನ ಜೊತೆಗೆ ಆಗುವ ಮುಂಚೆ ಘೋಡಗೇರಿ ಗ್ರಾಮದ ಮಲ್ಲಿಕಾರ್ಜುನ ಕಾಚಗಾರ ಇವರ ಜೊತೆಗೆ ಆಗಿತ್ತು . ಆತ ತೀರಿಕೊಂಡಿರುತಾನೆ. ಆತನ ಜೊತೆಗೆ 20 ವರ್ಷ ಬಾಳುವೆ ಮಾಡಿದ್ದೇನೆ ಎಂದರೆ ಸಾಕ್ಷಿ 1 ವರ್ಷಷಿ ಮಾತ್ರ ಮಾಡಿರುತ್ತೇನೆ. ಮಲ್ಲಿಕಾರ್ಜುನ ಕಾಚಗಾರ ಈತನ ಜೊತೆಗೆ ದಾಂಪತ್ಯದ ಫಲವಾಗಿ ನಮಗೆ ರಾಜೇಶ್ವರಿ ಎಂಬ ಒಬ್ಬ ಮಗಳು ವಯಸ್ಸು 26 ವರ್ಷ ಇರುತ್ತಾಳೆ. ಮಲ್ಲಿಕಾರ್ಜುನ ಇವರ ಮರಣ ಉತಾರ ಇರುವುದಿಲ್ಲ. ಮಲ್ಲಿಕಾರ್ಜುನ ತೀರಿಕೊಂಡು 4 ವರ್ಷ ಆಗಿದೆ. ಅವರ ಮರಣ ಉತಾರ ನನಗೆ ಹಾಜರ ಮಾಡಲು ಆಗುವುದಿಲ್ಲ. ಅವರ ಸಂಪರ್ಕ ಇರುವುದಿಲ್ಲ. ಮದುವೆಯಾದ 1 ವರ್ಷದಲ್ಲಿ ನನಗೆ ಅವರ ಜೊತೆಗೆ ವೈಮನಸ್ಸು ಬಂದು ನಮ್ಮ ಲಗ್ನ ಖುಲ್ಲಾ ಆಯಿತು ಎಂದು ಹೇಳುತ್ತಾರೆ. ಕೋರ್ಟನಲ್ಲಿ ಡೈವರ್ಸ ಆಗಿಲ್ಲ ಹೊರಗಡೆ ಹಿರಿಯರ ಸಮ್ಮುಖದಲ್ಲಿ ಲಗ್ನ ಮುರುಗಡೆ ಆಗಿದೆ. ಲಗ್ನ ಮುರುಗಡೆ ಆಗ ಬಗ್ಗೆ ನನ್ನ ಬಳಿ ಕಾಗದ ಪತ್ರ ಇದೆ . ಅದನ್ನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ಸದರಿ ಲಗ್ನ ಮುಳುಗಡೆ ಆದ ಪತ್ರಕ್ಕೆ ಸಾಕ್ಷಿದಾರರಾಗಿ ಸುರೇಶಗೌಡಾ ಉಮ್ಮಪ್ಪ ಪಾಟೀಲ ಮತ್ತು ಬಸಗೌಡಾ ಪಾಟೀಲ ( ತೀರಿಕೊಂಡಿರುತ್ತಾರೆ) ಹಾಗೂ ನನ್ನ ತಂದೆ ಬಸವಣ್ಣೆ ಲಗಮಣ್ಣಾ ಇರಪಾನಗೌಡ ( ತೀರಿಕೊಂಡಿರುತ್ತಾರೆ) ಸಹಿ ಹಾಕಿರುತ್ತಾರೆ. ಇವತ್ತಿನ ತನಕ ಮಲ್ಲಿಕಾರ್ಜುನ ಮತ್ತು ನನ್ನ ನಡುವೆ ಆದ ವಿವಾಹ ಮುರುಗಡೆ ಆಗಿಲ್ಲ , ಈಗಲೂ ಸಹ ನಾನು ಮಲ್ಲಿಕಾರ್ಜುನ ಖಾಜಗಾರ ಇವರ ಹೆಂಡತಿ ಇದ್ದೇನೆ ಎಂದರೆ ಸರಿಯಲ್ಲ.

3. ಚಿದಾನಂದ ಬದುಕಿದ್ದಾಗ ಆತ ಹುಕ್ಕೇರಿಯ ಹಿರಿಯ ಸೀವಿಲಿ ನ್ಯಾಯಾಲಯದಲ್ಲಿ ಎಂ ಸಿ 57/2015 ರಂತೆ ನನಗೆ ಮೋಸ ಮಾಡಿ ಮದುವೆ ಆಗಿದ್ದಾಳೆ ಅದನ್ನು ಕ್ಯಾನ್ಸಲ ಮಾಡಬೇಕೆಂದು ಕೇಸು ಹಾಕಿದ್ದ ಎಂದರೆ ಸಾಕ್ಷಿ ಅದನ್ನು ಚಿದಾನಂದನ ಅಳಿಯ ಮತ್ತು ಮಗ ಸೇರಿ ಮಾಡಿದ್ದರು ಎಂದು ಹೇಳುತ್ತಾರೆ. ನಾನು ಮೋಸ ಮಾಡಿ ಚಿದಾನಂದನನ್ನು ಮದುವೆ ಆಗಿದ್ದೆ ಎಂದು ದಾವೆ ಹಾಕಿದಕ್ಕದರು ಎಂದರೆ

ಸಾಕ್ಷಿ ಮದುವೆಯಾದ ನಂತರ ಇಬ್ಬರು ಮಕ್ಕಳೂ ಸಹ ಚಿದಾನಂದನ ದಾಂಪತ್ಯದಿಂದ ಆಗಿದೆ ಎಂದು ಹೇಳುತ್ತಾರೆ.

**4.** ಚಿದಾನಂದನು ತನ್ನ ಮಕ್ಕಳಾದ **4** ಮತ್ತು **5**ನೇ ಪ್ರತಿವಾದಿಗಳ ವಿರುದ್ಧ ಅಸಲು ದಾವೆ ನಂ. **49/2014** ರಂತೆ ಪಾಲು ವಿಭಾಗಕ್ಕಾಗಿ ದಾವೆ ಮಾಡಿದ್ದ ಎಂದರೆ ಸಾಕ್ಷಿ **4** ಮತ್ತು **5**ನೇ ಪ್ರತಿವಾದಿಗಳು ಚಿದಾನಂದನಿಗೆ ಹೊಡೆದು ಬಡೆದು ಹೊಲವನ್ನು ತಮ್ಮ ಹೆಸರಿಗೆ ಬರೆಸಿಕೊಂಡಿದ್ದಾಗಿ ಆ ಕಾರಣಕ್ಕಾಗಿ ದಾವೆ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ದಾವೆಯ ನಂತರ ರಾಜಿಯಾಗಿ ಚಿದಾನಂದ ತನ್ನ ಎಲ್ಲಾ ಆಸ್ತಿಯನ್ನು **4** ಮತ್ತು **5**ನೇ ಪ್ರತಿವಾದಿಗಳಿಗೆ ಕೊಟ್ಟಿದ್ದಾನೆ ಎಂದರೆ ಸಾಕ್ಷಿ ಚಿದಾನಂದನಿಗೆ ಹೊಡೆದು ಬಡೆದು ತಮ್ಮ ಹೆಸರಿಗೆ ಆಸ್ತಿಗಳನ್ನು ಬರೆಸಿಕೊಂಡಿದ್ದಾಗಿ ಹೇಳುತ್ತಾರೆ. ಸದರಿ ರಾಜಿ ಆದ ನಂತರ ರಾಜಿಯನ್ನು ಕ್ಯಾನ್ಸಲ ಮಾಡಿಸಬೇಕೆಂದು ನಾನು ಚಿದಾನಂದನ ಕಡೆಯಿಂದ ಮಿಸಲೇನಿಯಸ್ **9/2016** ರಂತೆ ಹುಕ್ಕೇರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಮಾಡಿಸಿದ್ದೆ ಎಂದರೆ ಸಾಕ್ಷಿ ಸದರಿ ಆಸ್ತಿ ನಮಗೂ ಬೇಕು ಎಂದು ಕೇಸು ಹಾಕಿದ್ದು ನಿಜ ಎಂದು ಹೇಳುತ್ತಾರೆ. ಆ ಪ್ರಕರಣದಲ್ಲಿ ನಾನು ಮತ್ತು ನಮ್ಮ ಮಕ್ಕಳು ನಮ್ಮನ್ನೂ ಪಾರ್ಟಿ ಮಾಡಬೇಕು ನಾವೂ ಚಿದಾನಂದನ ವಾರಸುದಾರರು ಇದ್ದೇವೆ ಎಂದು ಅರ್ಜಿ ಹಾಕಿದ್ದೆವು ಎಂದರೆ ನಿಜ. ಸದರಿ ನ್ಯಾಯಾಲಯದಲ್ಲಿ **4** ಮತ್ತು **5**ನೇ ಪ್ರತಿವಾದಿಗಳು ತಕರಾರು ಸಲ್ಲಿಸಿ, ನಾನು ಹಾಕಿದಂತಹ ಅರ್ಜಿಯನ್ನು ನ್ಯಾಯಾಲಯವು ದಿನಾಂಕ **19-10-2022** ರಂದು ವಜಾ ಮಾಡಿತ್ತು ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ಹೈಕೋರ್ಟಿಗೆ ಅಪೀಲು ಮಾಡಿರುತ್ತೇವೆ. ಆ ಬಗ್ಗೆ ಅಪೀಲು ಮಾಡಿದ ಕಾಗದವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಮಿಸಲೇನಿಯಸ್ **9/2016** ರಲ್ಲಿ ನನ್ನ ಸಾಕ್ಷಿ ಆಗಿದೆ ಎಂದರೆ ನಿಜ. ಆ ಪ್ರಕರಣದಲ್ಲಿ ಸುರೇಶ ಉಮ್ಮಪ್ಪ ಪಾಟೀಲ ಇವರ ಸಾಕ್ಷಿ ಆಗಿದೆ ಎಂದರೆ ನಿಜ. ಆ ಸಾಕ್ಷಿಯಲ್ಲಿ ನನ್ನ ಮತ್ತು ಮಲ್ಲಿಕಾರ್ಜುನನ ನಡುವೆ ಆದ ವಿವಾಹ ವಿಚ್ಛೇದನ ಆಗಿಲ್ಲ ಎಂದು ಒಪ್ಪಿ ಕೊಂಡಿದ್ದೇವೆ ಎಂದರೆ ಸರಿಯಲ್ಲ. ಚಿದಾನಂದ ಹಾಕಿದಂತಹ ಮಿಸಲೇನಿಯಸ್ **9/2016** ದಿನಾಂಕ **14-8-2024** ರಂದು ವಜಾ ಆಗಿದೆ ಎಂದರೆ ನಿಜ. ವಜಾ ಆದಂತಹ ಆದೇಶದ ವಿರುದ್ಧ ಹೈಕೋರ್ಟಿಗೆ ಅಪೀಲು ಮಾಡಿಲ್ಲ. ಈ ಎಲ್ಲಾ ಪ್ರಕರಣದಲ್ಲಿ ನಾನು ಚಿದಾನಂದನ ಹೆಂಡತಿ ಎಂದು ಸಾಬೀತು ಮಾಡುವ ಪ್ರಯತ್ನ ಮಾಡಿದ್ದೇನೆ ಆದರೂ ಸಹ ನ್ಯಾಯಾಲಯ ನಾನು ಚಿದಾನಂದನ ಹೆಂಡತಿ ಅಲ್ಲ, ಮಲ್ಲಿಕಾರ್ಜುನನ ಜೊತೆಗೆ ಆದಂತಹ ವಿವಾಹ ವಿಚ್ಛೇದನ ಆಗಿಲ್ಲ ಎಂದು ತೀರ್ಮಾಣ ಮಾಡಿದೆ ಎಂದರೆ ಸರಿಯಲ್ಲ. ನಾನು **4** ಮತ್ತು **5**ನೇ ಪ್ರತಿವಾದಿಗೆ ಗೊತ್ತಾಗದ ಹಾಗೆ ಒಂದು ಖೊಟ್ಟಿ ಪತ್ರ ತಯಾರು ಮಾಡಿ ಅದರಲ್ಲಿ ಚಿದಾನಂದನ ಹೆಂಡತಿ ಎಂದು ತೋರಿಸಿಕೊಂಡು ಹಾಗೂ **2** ಮತ್ತು **3** ನೇ ವಾದಿಯರು ಚಿದಾನಂದನ ಮಕ್ಕಳು ಎಂದು ಅವರ ಆಧಾರ ಕಾರ್ಡ ತಯಾರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. **2** ಮತ್ತು **3** ನೇ ವಾದಿಯರು ಚಿದಾನಂದನ ಮಕ್ಕಳು ಎಂದು

ನಾನು ಸುಳ್ಳು ಆಧಾರ ಪತ್ರ ತಯಾರು ಮಾಡಿಕೊಂಡಿದ್ದೇನೆ ಹಾಗೂ ಅದರ ಆಧಾರದ ಮೇಲೆ ಜನನ ಪ್ರಮಾಣ ಪತ್ರವನ್ನೂ ಸಹ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಚಿದಾನಂದ ಕೆಲಸ ಮಾಡುತ್ತಿದ್ದಂತಹ ಆರ್ಮಿಯಲ್ಲಿ ಆತನ ಪೆನಶನ ಪಡೆಯುವ ಸಲುವಾಗಿ ನಾನೇ ಆತನ ಹೆಂಡತಿ ಎಂದು ನಾನು ಸುಳ್ಳು ಕಾಗದ ಪತ್ರ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಿದಾನಂದನ ಬ್ಯಾಂಕ ಅಕೌಂಟಗಳಲ್ಲಿಯೂ ಸಹ ನಾನು ಆತನ ಹೆಂಡತಿ ಎಂದು ನಾನು ಸುಳ್ಳು ಬ್ಯಾಂಕ ಅಕೌಂಟ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಚಿದಾನಂದನ ಹೆಂಡತಿ ಎಂದು ಆತ ತೀರಿಕೊಂಡ ನಂತರ ತಹಶೀಲ್ದಾರ ಕಡೆಯಿಂದ ವಾರಸಾ ಪ್ರಮಾಣ ಪತ್ರ ಪಡೆದಿರುತ್ತೇನೆ. ನಾನು ವಾರಸಾ ಪ್ರಮಾಣ ಪತ್ರಕ್ಕೆ ಅರ್ಜಿ ಕೊಟ್ಟಾಗ 4 ಮತ್ತು 5ನೇ ಪ್ರತಿವಾದಿಯರು ಅದಕ್ಕೆ ತಕರಾರು ಕೊಟ್ಟು ಆ ಸಂಬಂಧ ನನಗೆ ವಾರಸಾ ಪ್ರಮಾಣ ಪತ್ರ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಚಿದಾನಂದನ ಹೆಂಡತಿ ಮತ್ತು ಮಕ್ಕಳು ಎಂದು ತೋರಿಸಲು ನಾನು ತಹಶೀಲಾದರ ಕೊಟ್ಟ ವಾರಸಾ ಪ್ರಮಾಣ ಪತ್ರವನ್ನು ಹಾಜರ ಮಾಡಬಲ್ಲೆ. ಚಿದಾನಂದ ಜೀವಂತ ಇದ್ದಾಗ ಆತ ನನ್ನ ಹೆಂಡತಿ ಮತ್ತು ಮಕ್ಕಳು ಎಂದು ಪರಿಗಣಿಸಲಿಲ್ಲ , ಆತ ಸತ್ತ ನಂತರ ನಾವು ಆತನ ಹೆಂಡತಿ ಮತ್ತು ಮಕ್ಕಳು ಎಂದು ಒಂದು ಸುಳ್ಳು ಕೇಸು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಚಿದಾನಂದನ ಹೆಂಡತಿ ಎಂದು ತೊರಿಸಲು ಅಧಿಕಾರಿಗಳಿಗೆ ವಾರಸಾ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ , ಆದರೂ ಸಹ ನಾನು ಆತನ ಹೆಂಡತಿ ಎಂದು ಸುಳ್ಳು ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು 4 ಮತ್ತು 5ನೇ ಪ್ರತಿವಾದಿಗಳ ಹಿಸ್ಸಾವನ್ನು ಎತ್ತಿ ಹಾಕಲು ನಾನು ಚಿದಾನಂದನ ಹೆಂಡತಿ ಮತ್ತು ಮಕ್ಕಳು ಎಂದು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. 4 ಮತ್ತು 5ನೇ ಪ್ರತಿವಾದಿಗಳು ಮಾತ್ರ ಚಿದಾನಂದನ ವಾರಸುದಾರರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**